ಮಾಡಬೇಕಾದುದು ರೂಢಿಯಲ್ಲಿದೆ. ಅವರು ಒಂದು ವೇಳೆ ಸಮಾಲೋಚನೆ ಇದುವರೆವಿಗೂ ಮಾಡದಿದ್ದರೆ, ಸಮಾಲೋಚನೆ ಮಾಡಬೇಕಾದುದು ಅತ್ಯಗತ್ಯ. ಆದ್ದರಿಂದ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಆದಷ್ಟು ಶೀಘ್ರವಾಗಿ ನೇಮಕ ಮಾಡುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ಎಂಬುದನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ಹೇಳಿದಂತಹ ವಿಷಯವನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ.

(v) ಬೆಳ್ತಂಗಡಿ ತಾಲ್ಲೂಕಿನ ಸಿ. ಎ. ಬ್ಯಾಂಕಿನ ಅವ್ಯವಹಾರದ ಬಗ್ಗೆ

ಶ್ರೀ ವಸಂತ ಬಂಗೇರ — ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಸಿ.ಎ. ಬ್ಯಾಂಕಿನಲ್ಲಿ ಹಿಂದೆ ಇದ್ದಂತಹ ಅಧ್ಯಕ್ಷರು ಅವ್ಯವಹಾರ ಮಾಡಿರುವ ಬಗ್ಗೆ ಅವರ ಮೇಲೆ ವ್ಯಾಜ್ಯ ನಡೆಯುತ್ತಿದೆ. ಈ ವರ್ಷ ಚುನಾವಣೆಯಲ್ಲಿ 9ಜನರ ಒಂದು ಗುಂಪು ಮತ್ತು 6 ಜನರ ಇನ್ನೊಂದು ಗುಂಪು, ಈ ಪ್ರಕಾರವಾಗಿ ಚುನಾಯಿತರಾಗಿದ್ದಾರೆ. 9 ಜನರ ಗುಂಪು, ಚುನಾವಣೆಯ ದಿನವನ್ನು ಮುಂದೂಡಿ ಒಂದು ಅರ್ಜಿ ಸಲ್ಲಿಸಿದ್ದಾರೆ. ಆದರೆ 6 ಜನ ಇರತಕ್ಕಂತಹ ಮತ್ತೊಂದು ಗುಂಪು, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಪತ್ತಿರ ಬೆಳ್ತಂಗಡಿಯಲ್ಲಿರುವ ಸಿ.ಇ.ಒ. ಮುಖಾಂತರ ಪಿತೂರಿ ನಡೆಸಿ ಈ 9 ಜನರ ಗುಂಪು ಯಾವಾಗ ಊರಿನಲ್ಲಿ ಇಲ್ಲದ ಸಮಯವನ್ನು ನೋಡಿ ಚುನಾವಣೆಯ ದಿನಾಂಕವನ್ನು ನಿಗದಿ ಮಾಡಿ, ಆ ದಿವಸ ಆಲ್ಲಿಗೆ ಬಂದು ಅವರಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ಆ ರೀತಿ ಆಯ್ಕೆ ಮಾಡಿದಂತಹ ಅಧ್ಯಕ್ಷರಾದರೂ ಯಾರೆಂದರೆ, ಹಿಂದೆ 75-76ರಲ್ಲಿ ಏನು ಅವ್ಯವಹಾರ ಮಾಡಿದ್ದಾರೆಂದು ವ್ಯಾಜ್ಯ ನಡೆಯುತ್ತಿದೆಯೋ ಅವರನ್ನೇ ಪುನಃ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆದ್ದರಿಂದ ಇದರಲ್ಲಿ ಆಕ್ರಮ ವ್ಯವಹಾರ ಮಾಡಿದಂತಹ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿಟ್ಟು, ಇದರ ಬಗ್ಗೆ ತನಿಖೆ ನಡೆಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್ ಎಲ್. ಜಾಲಪ್ಪ.— ನಾನು ಈಗ ತಾನೆ ಬಂದಿದ್ದೇನೆ. ವಿವರಗಳನ್ನು ನಾಳೆ ತರಿಸಿ ಕೊಡುತ್ತೇನೆ.

ಅಧ್ಯಕ್ಷರು.— ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ನೀವು ಕೇಳಿರುವ ವಿಷಯವನ್ನು ಗಮನ ಸೆಳೆಯುವ ಸೂಚನೆಯ ಮೂಲಕವೂ ಕಳಿಸಿದ್ದೀರಿ. ಇಲ್ಲಿ 334ರ ಒಳಗೆ ಕಳಿಸಿದರೆ ಉತ್ತರ ಕೊಡಲೇ ಬೇಕೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಗಮನ ಸೆಳೆಯುವ ಸೂಚನೆಯನ್ನು ಕಳಿಸಿದ್ದೇನೆ. ಯಾವುದರಲ್ಲೂ ಉತ್ತರ ಬಂದಿಲ್ಲ. ಯಾವಾಗ ಉತ್ತರ ಕೊಡುತ್ತೇವೆ ಎಂದು ಕೂಡ ಹೇಳಿಲ್ಲ.

ಅಧ್ಯಕ್ಷರು.— ಶ್ರೀ ನಾಣಯ್ಯನವರೇ ನೀವು ಹೇಳಿ.

vi) ಕೊಡಗು ಜಿಲ್ಲೆಯಲ್ಲಿ ಸರ್ಕಾರಿ ವೈದ್ಯರುಗಳ ನೇಮಕಾತಿ

ಶ್ರೀ ಎಂ. ಎಂ. ನಾಣಯ್ಯ — ಕೊಡಗು ಜಿಲ್ಲೆಯಲ್ಲಿ 36 ಸರ್ಕಾರಿ ವೈದ್ಯರ ಹುದ್ದೆಗಳು ಖಾಲಿ ಬಿದ್ದಿವೆ. ಪೆಡ್‌ಕ್ವಾಟರ್ಸ್ ಆಸ್ಪತ್ರೆಯಲ್ಲಿ 14 ಹುದ್ದೆಗಳೂ, ಗ್ರಾಮಾಂತರ ಪ್ರದೇಶಗಳಲ್ಲಿ 22 ವೈದ್ಯರ ಹುದ್ದೆಗಳು ಒಟ್ಟು 36 ಹುದ್ದೆಗಳು ಖಾಲಿಯಿವೆ. ಇಲ್ಲಿಯ ಜನರು ವೈದ್ಯಕೀಯ ಸೌಲಭ್ಯ ಈ ಆಸ್ಪತ್ರೆಗಳಲ್ಲಿ ಸಿಗದೆ ತುಂಬಾ ತೊಂದರೆಗೊಳಗಾಗಿದ್ದಾರೆ. ಹೀಗಾಗಿ ಇವರು ಖಾಸಗಿ ನರ್ಸಿಂಗ್ ಹೋಮ್‌ಗಳಲ್ಲಿ ಚಿಕಿತ್ಸೆ ಪಡೆಯಬೇಕಾದ ಪರಿಸ್ಥಿತಿ ಬಂದಿದೆ. ಅನೇಕ ಜನರಿಗೆ ಇಲ್ಲಿ ಚಿಕಿತ್ಸೆ ಪಡೆಯುವುದು ಬಹಳ ದುಬಾರಿಯಾಗಿದೆ ಆದ್ದರಿಂದ ಸರ್ಕಾರ ತಕ್ಷಣ ಕ್ರಮ ತೆಗೆದುಕೊಂಡು ಖಾಲಿ ಬಿದ್ದಿರುವ 36 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ — ನಾನು ಆರೋಗ್ಯ ಮಂತ್ರಿಗಳಿಗೆ ಈ ವಿಚಾರ ತಿಳಿಸಿ ಇದರ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಕೆ. ಕಾಂತಾ. — ಅಧ್ಯಕ್ಷರೇ, ಸರ್ಕಾರಿ ಡೈರಿ ಹಾಲು ವಿತರಣೆ ಮಾಡಲಿಕ್ಕೆ ಹೆಂಡರು ಗಳಿಗೆ ಕಮಿಷನ್ ಮೂರರಷ್ಟು ಸಿಗುತ್ತಿತ್ತು ಹೋದ ತಿಂಗಳವರೆಗೆ .....

ಅಧ್ಯಕ್ಷರು.— ಮಾನ್ಯ ಕಾಂತಾರವರೇ ನೀವು ಗಮನ ಸೆಳೆಯುವ ಸೂಚನೆಯನ್ನೂ ಕಳಿಸಿದ್ದೀರಿ. ಈಗ ಮಂತ್ರಿಗಳು ಉತ್ತರ ಹೇಳಿಬಿಟ್ಟರೆ ಮತ್ತೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಗಮನ ಸೆಳೆಯುವ ಸೂಚನೆಗೆ ಪೂರ್ಣ ಪ್ರಮಾಣದ ಉತ್ತರ ಬರುತ್ತದೆ. ಆದಕ್ಕಾಗಿ ನೀವು ಕಾಯುವುದಾದರೆ ಈಗ ಕೇಳಬೇಡಿ.

ಶ್ರೀ ಎಸ್. ಕೆ. ಕಾಂತಾ.—ಗಮನ ಸೆಳೆಯುವ ಸೂಚನೆ ಬರುವುದಾದರೆ ಈಗ ನಾನು ಕೇಳುವುದಿಲ್ಲ.

ಶ್ರೀ ಎಫ್. ಎ. ಕೊಪ್ಪದ್.— ಅಧ್ಯಕ್ಷರೇ, ರಾಮದುರ್ಗ ತಾಲ್ಲೂಕಿನಲ್ಲಿ ಮುನ್ನೂರು ಸಾಮಿಲ್ ಗಳಿವೆ. ವಿದ್ಯುಚ್ಛಕ್ತಿ ಕೊರತೆಯಿಂದ ಅವುಗಳು ಬಹಳ ತೊಂದರೆಗೆ ಒಳಗಾಗಿವೆ. ಅವರು ಚಳುವಳಿ ನಡೆಸುವ ಸಂಭವ ಇದೆಯೆಂದು ತಿಳಿದುಬಂದಿದೆ.